ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಇಂಥ ನಿರ್ಧಾರವನ್ನು ನಾವು ಇಷ್ಟರವರೆಗೆ ಕೈಗೊಂಡಿಲ್ಲ. ಯಾವ ರೀತಿಯಾದ ವಿದ್ಯಾಭ್ಯಾಸವನ್ನು ನಾವು ಕೊಡುತ್ತಿದ್ದೇವೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇವೆ. ಕನ್ನಡ ಮಾತೃಭಾಷೆಯಾಗಿರತಕ್ಕ ಜಾಗದಲ್ಲಿ ಇಂಗ್ಲೀಷ್ ಶಾಲೆಗಳನ್ನು ನಡೆಸುವುದಕ್ಕೆ ನಾವು ಪರ್ಮಿಷನ್‌ನ್ನು ಕೊಟ್ಟಿಲ್ಲ. ಆದರೆ ಕನ್ನಡ ಮಾತೃಭಾಷೆಯಿಲ್ಲದ ಜಾಗಗಳಲ್ಲಿ, ನಮ್ಮ ಭಾಷೆಯನ್ನು ಕಲಿಯಲಿಕ್ಕೆ ಸಾಧ್ಯವೇ ಇಲ್ಲದಂಥ ಜನರಿಗೆ ಕೆಲವು ಕಡೆ ಮಾತ್ರ ಇಂಗ್ಲೀಷ್ ಮೀಡಿಯಂನಲ್ಲಿ ಶಿಶುವಿಹಾರಗಳನ್ನು ನಡೆಸುವುದಕ್ಕೆ ನಾವು ಪರ್ಮಿಷನ್ ಕೊಟ್ಟಿದ್ದೇವೆ.

Funds for Development of Sivara Tank and Ramachandrapura Tank, Tiptur Taluk

776. SRI V. L. SHIVAPPA (Tiptur).—Will the Chief Minister be pleased to state.—

(*a*) the year in which funds are provided for the development of Sivara tank and Ramachandrapura tank (Besige) in Tiptur Taluk;

(*b*) what is the estimated cost;

(*c*) what is the amount spent so far?

SRI B. SUBBAYYA SHETTY (Minister for Education).—[on behalf of SRI D. DEVARAJ URS (Chief Minister)]

(*a*)—

(1) Sivara Tank			
During 1977-78	...	Rs.	10,000
During 1978-79	...	Rs.	50,000
(2) Ramachandrapura Tank			
During 1977-78	...	Rs.	10,000
During 1978-79	...	Rs.	50,000

(*b*)—

(1) Sivara Tank	...	Rs.	41,000
(2) Ramachandrapura Tank	...	Rs.	1,58,000

(*c*) Nil

ಶ್ರೀ ವಿ. ಎಲ್. ಶಿವಪ್ಪ.—ಶಿವಾರಾ ಟ್ಯಾಂಕ್ ಡೆವಲಪ್‌ಮೆಂಟ್‌ಗೋಸ್ಕರ ಎಷ್ಟು ಹಣವನ್ನು ಒದಗಿಸಿದ್ದೀರಿ ಎಂದು ಪ್ರಶ್ನೆ ಕೇಳಿದಕ್ಕೆ ೧೯೭೭-೭೮ರಲ್ಲಿ ೧೦,೦೦೦ ರೂಪಾಯಿಗಳನ್ನು, ೧೯೭೮-೭೯ರಲ್ಲಿ ೫೦,೦೦೦ ರೂಪಾಯಿಗಳನ್ನು ಹೀಗೆ ಒಟ್ಟು ೬೦ ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ; ಆದರೆ ಇದರ ಅಂದಾಜು ವೆಚ್ಚ ೪೧ ಸಾವಿರ ರೂಪಾಯಿಗಳಿರುವಾಗ, ೬೧ ಸಾವಿರ ರೂಪಾಯಿಗಳನ್ನು ತಾವು ಏಕೆ ಮಂಜೂರು ಮಾಡಿದ್ದೀರಿ?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ತಾವು ಈಗ ಶಿವಾರಾ ಟ್ಯಾಂಕ್ ಬಗ್ಗೆ ಹೇಳಿದ್ದೀರಿ. ಅದಕ್ಕೆ an estimate for the restoration of Sivara Tank amounting to Rs. 1.62 lakhs was first got up to the benefit of people residing in the achacut area of 182 Acres. The estimate was received in the Chief Engineer's Office and again it was re-considered and latter on it was found that only the improvement to the existing bund was necessary. So, there was a re-estimate and the re-estimate was for Rs. 41,000 and it is

being now finalised and only after the sanction of the estimate, the work will be taken up. But what the hon. Member says is, why this money was allotted here. But only after the estimate is sanctioned, the work will be taken up.

ಶ್ರೀ ವಿ. ಎಲ್, ಶಿವಪ್ಪ.—ಇದು ಒಂದು ವಿಚಿತ್ರವಾದ ಕೆಲಸ. ಯಾವ ಜಾಗದಲ್ಲಿ ಈ ಕೆರೆ ಒಡೆದು ಹೋಯಿತು, ಅಂಥ ಜಾಗದಲ್ಲಿ ಕೋಡಿಯನ್ನು ಮಾಡಿದ್ದಾರೆ. ಒಡ್ಡನ್ನು ಹಾಗೆಯೇ ಬಿಟ್ಟರು. ಅಲ್ಲಿ ಕೆಲಸ ಏನೂ ಮಾಡಬೇಕಾದ್ದು ಇಲ್ಲ. ಸ್ವಲ್ಪ ಮಣ್ಣನ್ನು ಹಾಕಿಸುವ ಕೆಲಸಕ್ಕೆ ಹಿಂದೆಯೇ ಎಷ್ಟಿಮೇಟ್ ಮಾಡಿಸಿದರು. ನಮ್ಮ ಏರಿಯಾ ಕೋಕೊನೆಟ್ ಬೆಳೆಯುವ ಏರಿಯಾ ಆದ್ದರಿಂದ, ಅಲ್ಲಿ ಕೆರೆಯ ನೀರು ಇಂಗಿ ಹೋಗುತ್ತದೆ. ಮೊದಲು ಏನು ೪೧ ಸಾವಿರ ರೂಪಾಯಿಗಳ ಎಷ್ಟಿಮೇಟ್ ಮಾಡಿಸಿದ್ದರು ಅದು ಸರಿಯಾಗಿತ್ತು. ಮೊದಲು ಯಾವ ರೀತಿಯಲ್ಲಿ ಎಷ್ಟಿಮೇಟ್ ಮಾಡಿಸಿದ್ದರು ಅದೇ ರೀತಿಯಲ್ಲಿ ಕೆಲಸ ಪ್ರಾರಂಭಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ನಮ್ಮ ಇಂಜನಿಯರ್‌ಗಳ ಎಷ್ಟಿಮೇಟ್ ಪ್ರಕಾರ ಇದರ ಕೆಲಸ ಮಾಡಬೇಕು ಎಂದು ಇದೆ. ಮಾನ್ಯ ಸದಸ್ಯರು ನಮ್ಮ ಇಂಜನಿಯರುಗಳು ಮಾಡಿದಂಥ ಎಷ್ಟಿಮೇಟನ್ನು ಪುನಃ ಪರಿಶೀಲನೆ ಮಾಡಬೇಕು ಎಂದು ತಿಳಿಸಿದ್ದಾರೆ. ನಾನು ಇಲಾಖೆಯವರಿಗೆ ಮತ್ತೆ ಇದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ತಿಳಿಸುತ್ತೇನೆ,

ಶ್ರೀ ವಿ. ಎಲ್. ಶಿವಪ್ಪ.—ಈ ಟ್ಯಾಂಕ್‌ನ ಕೆಲಸಕ್ಕಾಗಿ, ೭೭–೭೮ರಲ್ಲಿ ೧೦ ಸಾವಿರ ರೂಪಾಯಿ ಗಳನ್ನು, ೭೮–೭೯ರಲ್ಲಿ ೫೦ ಸಾವಿರ ರೂಪಾಯಿಗಳನ್ನೂ ಒಟ್ಟು ೬೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೂ ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ. ತಾವು ಈಗ ಈ ಕೆಲಸವನ್ನು ತರಾತುರಿಯಾಗಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಎಷ್ಟಿಮೇಟ್ ಸ್ಯಾಂಕ್ಷನ್ ಆದ ತಕ್ಷಣ ನಾವೂ ಸಹ ತರಾತುರಿ ಯಿಂದ ಕೆಲಸ ಮಾಡಬೇಕು ಎಂದು ಇದ್ದೆವು. ಆದರೆ ಮಾನ್ಯ ಸದಸ್ಯರು ಇದನ್ನು ಪುನ: ಪರಿಶೀಲನೆ ಮಾಡಬೇಕು ಎಂದು ಹೇಳಿದ್ದಾರೆ. ಇದರ ಅಂದಾಜನ್ನು ಮತ್ತೆ ಪರಿಶೀಲನೆಮಾಡಿ, ಕೆಲಸ ಪ್ರಾರಂಭ ಮಾಡುವುದಕ್ಕೆ ಸ್ವಲ್ಪ ತಡವಾಗುತ್ತದೆ ಎನ್ನುವುದನ್ನು ನಾನು ಮಾನ್ಯ ಸದಸ್ಯರಗಮನಕ್ಕೆ ತರಬೇಕಾಗಿದೆ.

Bus Stand at Gorur, Hassan Taluk

834. SRI K. H. HANUME GOWDA (Hassan).—Will the Minister for Transport and Tourism be pleased to state.—

(*a*) the date on which foundation stone for the bus stand at Gorur Village, Kattaya hobli of Hassan taluk was laid and by whom;

(*b*) whethere the plan and estimate of this building has been prepared;

(*c*) the reasons for not starting the work of this building?

SRI R. GUNDU RAO (Minister for Transport and Tourism).—

(*a*) Sri D. Devaraj Urs, the then transport Minister and the present Chief Minister laid the foundation stone for the Bus Stand at Gorur Village on 12th September 1966.

(*b*) No.

(*c*) The construction work of the Bus Stand Building could not be taken up since there was some impendiment regarding ownership of the site fixed for this purpose and the said site has not yet come under the possession of K.S.R.T.C.